

ನಿಧಾನದಲ್ಲಿ "ಶ್" ಎನ್ನಲು ಆಗಷ್ಟೇ ಶುರು ಮಾಡಿದ್ದ ಕುಕ್ಕರಿನ ತಲೆ ಬುರುಡೆಗೊಂದು ಸೌಟಿನಲ್ಲಿ ಗುದ್ದಿದ ಕೌಸಲ್ಯ, "ಥತ್, ಇದು ಯಾವಾಗಲೂ ಹೀಗೆ ಎಲ್ಲಿಗಾದರು ಹೊರಡುವ ಸಮಯದಲ್ಲಿ ತಲೆ ಎತ್ತುವುದೇ ಇಲ್ಲ, ಕೂತಲ್ಲೇ ಕೂತು ಬಿಡುತ್ತದೆ" ಎನ್ನುತ್ತ ಅದಕ್ಕಿಂತಲೂ ಜೋರಾದ ನಿಟ್ಟುಸಿರುಟ್ಟಳು. 'ಇನ್ನು ಹೊರಡುವುದು ಯಾವಾಗ – ಬೇಗ ಬೇಗ ಸಿಳ್ಳು ಬರದಿದ್ದರೆ ಅನ್ನವಾಗುವಂತಿಲ್ಲ, ಅದು ಆಗದೆ ತಾನು ಹೊರಡುವಂತಿಲ್ಲ. ಮುಖ್ಯ ಕೆಲಸ ಇವತ್ತೇ ಇರುವುದು. ಕಳೆದ ಹದಿನೈದು ದಿನದಿಂದ ಪಟ್ಟ ಶ್ರಮಕ್ಕೆ ಇಂದು ಬೆಲೆ ಬರಲಿದೆ. ಎಷ್ಟೆಲ್ಲ ಸಂಭ್ರಮದ ಕ್ಷಣ ಇನ್ನು ಒಂದು ಗಂಟೆಯಲ್ಲಿ. ಆಹ್, ನೆನೆಸಿಕೊಂಡರೇ ಮೈ ಜುಂ ಎನ್ನುತ್ತದೆ. ಆದರೆ ಈ ಅನ್ನ? ಬೇಕಂತಲೇ ಸತಾಯಿಸುತ್ತಿದೆ. ಬಿಟ್ಟು ಹೋಗುವಂತಿಲ್ಲ, ಬೇಯಿಸಿಟ್ಟುಹೋಗಲೇ ಬೇಕು. ಅತ್ತೆಗೆ ಕೈಲಿ ಕೂಡುವುದಿಲ್ಲ... ಎಲ್ಲ ಮಾಡಿಟ್ಟೇ ಎಲ್ಲಿಗಾದರೂ ಸಾಯಬೇಕು. ಅಂದಹಾಗೆ ಸಮಯ ಆಗಲೇ ಒಂಬತ್ತು' ಎಂದು ತನ್ನಲ್ಲೇ ಅಂದುಕೊಂಡಳು. ಗಡಿಯಾರ ತನ್ನ ಕಾಲಿಗೆ ಸ್ಕೇಟಿಂಗ್ ಕಟ್ಟಿಕೊಂಡಿರುವಂತೆ ಆಕೆಗೆ ಭಾಸವಾಯಿತು.

ನಾಳೆ ಎಲ್ಲರೂ ಸರಿಯಾಗಿ ಹತ್ತಕ್ಕೆ ಒಟ್ಟಿಗೆ ಹನುಮಂತನ ದೇವಸ್ಥಾನದ ಹತ್ತಿರ ಸೇರಬೇಕು. ತಡವಾದರೆ ಮುಂದಿನ ಕಾರ್ಯಕ್ರಮಕ್ಕೆ ತಡವಾದೀತು ಎಂದು ನಿನ್ನೆಯೇ ಆಯೋಜಕರು ಹೇಳಿದಾಗ ಹತ್ತಕ್ಕೆ ಅಲ್ವಾ ಬರಬಹುದು ಎನ್ನಿಸಿತ್ತು. ಆದರೆ ಬೆಳಗ್ಗೆ ಎದ್ದದ್ದು ಕೊಂಚ ತಡವಾಯಿತು. ಅದಕ್ಕೆ ಸರಿಯಾಗಿ ಕೆಲಸದವಳು ಕೈ ಕೊಟ್ಟಿದ್ದಾಳೆ. ಛೇ ಕೆಲಸ ಮುಗಿಯುತ್ತಲೇ ಇಲ್ಲ. ಸರಿ, ಇನ್ನು ಸಾಂಬಾರಿಗೆ ಒಂದಿಷ್ಟು ಇಂಗು ಹಾಕಿ ಒಗ್ಗರಣೆ ಕೊಟ್ಟರಾಯಿತು. ಇಂಗು ಹಾಕದಿದ್ದರೆ ಈ ಮುದುಕಿಗೆ ತಿಂದ ಅನ್ನ ಮೈಗೆ ಹತ್ತುವುದಿಲ್ಲ. ಮಗ ಬಂದ ತಕ್ಷಣ ಒಂದಕ್ಕೆ ಎರಡು ಸೇರಿಸಿ ಹೇಳತ್ತೆ... ಅವನೋ ತನ್ನನ್ನು ಒಂದು ಮಾತೂ ಕೇಳದೆ ಏಕ್‌ದಂ ಬಡಿಯಲು ಕೈ ಎತ್ತುತ್ತಾನೆ. ಆಕೆ ಮಾಡುವುದು ನೋಡಿದರೆ ಒಂದು ದಿನ ಸಮಾ ಬೆಳ್ಳುಳ್ಳಿ ಹಾಕಿ ಮಜ್ಜಿಗೆ ಹುಳಿ ಮಾಡಿ ತಿನ್ನಿಸಬೇಕು ಅನ್ನಿಸತ್ತೆ. ಆದರೆ ಅದು ತನ್ನಿಂದ ಸಾಧ್ಯವಿಲ್ಲ. ಅಪ್ಪ ಅಮ್ಮನ ಮನೆಯಲ್ಲಿ ಗಟ್ಟಿ ಇದ್ದರೆ ಹಾಗೆಲ್ಲ ಮಾಡಿ ಒಂದಿಷ್ಟು ಜಗಳವಾಡಿ ಹೋಗಬಹುದು. ಅವರು ತಾನೆ ಯಾರು ಯಾರನ್ನ ಎಂದು ನೋಡ್ತಾರೆ. ಸಾಲು ಸಾಲು ಐದು ಹೆಣ್ಣು ಮಕ್ಕಳ ಮದುವೆ ಮಾಡುವುದರಲ್ಲಿಯೇ ಸೋತು ಹೋಗಿದ್ದಾನೆ ಅಪ್ಪಯ್ಯ. ಗಂಡ ಹೊಡಿತಾನೆ ಎಂದು ಮದುವೆಯಾದ ಹೊಸತರಲ್ಲಿ ದೂರಿದ್ದಕ್ಕೆ ಅಮ್ಮ ಅತ್ತು ಕರೆದು ಏನಾದರೂ ಸೈ ನೀನೆ ಹೊಂದಿಕೊಂಡು ಹೋಗು. ವಾಪಸ್ಸು ಮಾತ್ರ ಇಲ್ಲಿಗೆ ಬರಬೇಡ. ತಂಗಿಯರಿದ್ದಾರೆ ಎಂದು ಕಣ್ಣೊರೆಸಿಕೊಂಡಿದ್ದಳು. ಇನ್ನು ಹೇಳುವುದಾದರೂ ಯಾರಲ್ಲಿ. ತನ್ನದೂ ಒಂದು ಜೀವನ – ಒಂದು ಮಕ್ಕಳಿಲ್ಲ, ಮರಿಗಳಿಲ್ಲ. ಎಷ್ಟೋ ಬಾರಿ ಸತ್ತು ಬಿಡಬೇಕು ಎನಿಸಿದೆ. ಸಾಯುವುದಕ್ಕೆ ಬದುಕುವುದಕ್ಕಿಂತಲೂ ಹೆಚ್ಚಿನ ಧೈರ್ಯ ಬೇಕು ಅಂತೆಯೇ ಸುಮ್ಮನಾದದ್ದು, ನೂರಾರು ರಾತ್ರಿಗಳ ಕಣ್ಣು ಬಿಟ್ಟುಕೊಂಡೇ ಕಳೆದಿದ್ದು. ಕಣ್ಣ ಸುತ್ತಲೂ ಎಂದೂ ಮುಗಿಯದ ಕಪ್ಪು ಹಚ್ಚಿಕೊಂಡಿದ್ದು. ಈಗೀಗ ಒಂದಿಷ್ಟು ನೆರೆಗೂದಲು ಬಂದು ಮುಟ್ಟು ನಿಂತ ಮೇಲೆ ಪರವಾಗಿಲ್ಲ.